(4)

12

# ಕರ್ನಾಟಕ ಸರ್ಕಾರ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

## (ಜನಸ್ಪಂದನ ಕೋಶ)

ಸಂಖ್ಯೆ: ಸಿಆಸುಇ 46 ಆರ್‌ಟಿಐ 2012

3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ,
ಬೆಂಗಳೂರು, ದಿನಾಂಕ: 26.04.2012

### ಸುತ್ತೋಲೆ

ವಿಷಯ: ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೋರಿದಾಗ ಅರ್ಜಿದಾರರಿಗೆ ಮಾಹಿತಿ ನೀಡಿದ ಸ್ವೀಕೃತಿ/ಅಂಚೆ ರಸೀದಿ ಸ್ವೀಕೃತಿ ಪಡೆಯುವ ಬಗ್ಗೆ.

ಉಲ್ಲೇಖ: ಕರ್ನಾಟಕ ಮಾಹಿತಿ ಆಯೋಗದ ಆದೇಶ ಸಂಖ್ಯೆ:ಕೆ.ಐ.ಸಿ. 7153 ಪಿಟಿಎನ್ 2011 ಮತ್ತು ಇತರೆ 9 ಪ್ರಕರಣಗಳು ದಿನಾಂಕ 02.04.2012.

- - -

ಕರ್ನಾಟಕ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರು ಉಲ್ಲೇಖದಲ್ಲಿನ ದಿನಾಂಕ 2.4.2012ರ ಆದೇಶದಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೋರಿದಾಗ ಅರ್ಜಿದಾರರಿಗೆ ನೀಡಿರುವ ಮಾಹಿತಿಯ ಪ್ರತಿಗಳನ್ನು (ಅಡಕಗಳೊಂದಿಗೆ) ಅರ್ಜಿದಾರರಿಂದ ಪಡೆದ ಸ್ವೀಕೃತಿ/ಅಂಚೆ ಕಛೇರಿಯ ರಸೀದಿಯ ಜೆರಾಕ್ಸ್ ಪ್ರತಿ, ಮಾಹಿತಿ ನೀಡಲು ವಿಳಂಬ ಆಗಿದ್ದಲ್ಲಿ ಅದಕ್ಕೆ ಉಚಿತ ಕಾರಣಗಳನ್ನು ಪ್ರತಿವಾದಿಗಳಿಂದ ಪಡೆದು ಮಾಹಿತಿ ಆಯೋಗಕ್ಕೆ ತಲುಪಿಸುವಂತೆ ದೂರವಾಣಿಯ ಮುಖಾಂತರ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ ಇವರಿಗೆ ತಿಳಿಸಿದ್ದಾಗ್ಯೂ ಸಹ ಆಯೋಗಕ್ಕೆ ಸಲ್ಲಿಸಿರುವುದಿಲ್ಲ. ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚನೆಗಳನ್ನು ನೀಡುವಂತೆ ಕೋರಿರುತ್ತಾರೆ.

ಆದ್ದರಿಂದ, ಕರ್ನಾಟಕ ಮಾಹಿತಿ ಆಯೋಗದಲ್ಲಿ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೋರಿದಾಗ ಅರ್ಜಿದಾರರಿಗೆ ನೀಡಿರುವ ಮಾಹಿತಿಯ ಪ್ರತಿಗಳನ್ನು (ಅಡಕಗಳೊಂದಿಗೆ), ಅರ್ಜಿದಾರರಿಂದ ಪಡೆದ ಸ್ವೀಕೃತಿ ಅಥವಾ ಅಂಚೆ ಕಛೇರಿಯ ರಸೀದಿಯ ಜೆರಾಕ್ಸ್ ಪ್ರತಿ ಹಾಗೂ ಮಾಹಿತಿ ನೀಡಲು ವಿಳಂಬ ಆಗಿದ್ದಲ್ಲಿ ಅದಕ್ಕೆ ಉಚಿತ ಕಾರಣಗಳನ್ನು ಕರ್ನಾಟಕ ಮಾಹಿತಿ ಆಯೋಗಕ್ಕೆ ತುರ್ತಾಗಿ ಪ್ರಕರಣ ವಿಚಾರಣೆಗೆ ಬರುವ 2-3 ದಿನಗಳ ಮುಂಚಿತವಾಗಿಯೇ ತಲುಪಿಸುವಂತೆ ಈ ಮೂಲಕ ಸೂಚಿಸಲಾಗಿದೆ.

Ranganath
(ಎಸ್.ವಿ.ರಂಗನಾಥ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

ಗೆ,

1. ಎಲ್ಲಾ ಜಿಲ್ಲಾಧಿಕಾರಿಗಳು,
2. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
3. ಹೆಚ್ಚುವರಿ ಪ್ರತಿಗಳು